ಕರ್ನಾಟಕ ವಿಧಾನಸಭೆ

ಸೋಮವಾರ 26ನೇ ಜೂನ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು :

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಸಿ.ಎಂ. ಚುರ್ಚಿಹಾಳಮಠ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಸಿ.ಎಂ. ಚುರ್ಚಿಹಾಳಮಠ ಅವರು 1924ರಲ್ಲಿ ರೋಣ ತಾಲ್ಲೂಕು ನಾರೆಗಲ್‌ನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಆಯುರ್ವೇದ ವೈದ್ಯರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಶ್ರೀಯುತರು ಸಾಹಿತಿಗಳಾಗಿ, ತಾಲ್ಲೂಕು ಕಾಂಗ್ರೆಸ್ ಸೇವಾದಳ ಮತ್ತು ಹೋಂ ಗಾರ್ಡ್ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಆಯುರ್ವೇದ ವೈದ್ಯರ ಸಂಘ, ಹೈದರಾಬಾದ್ ಕರ್ನಾಟಕ ನಿರಾಶ್ರಿತರ ಸಂಘಗಳು ಸೇರಿದಂತೆ ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಹೈದರಾಬಾದ್ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ಪತ್ರಿಕಾ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀ ಚುರ್ಚಿಹಾಳಮಠ ಅವರು ನಾಲ್ಕನೆ ವಿಧಾನಸಭೆಗೆ ಮುಂಡರಗಿ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಶ್ರೀಯುತರು ದಿನಾಂಕ 21.06.2006 ರಂದು ನಿಧನ ಹೊಂದಿದರು.

11.20 A.M.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಮಾಜಿ ಸದಸ್ಯರಾಗಿದ ಡಾ: ಸಿ.ಎಂ. ಚುರ್ಚಿಹಾಳಮಠ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದಂಥ ನಾಯಕರು. ರಾಜಕಾರಣದಲ್ಲಿದ್ದರೂ ಸಾಹಿತಿಗಳಾಗಿ ಮತ್ತು ಕಾಂಗ್ರೆಸ್ ಸೇವಾದಳದಲ್ಲಿ ಮತ್ತು ಹೋಂಗಾರ್ಡ್‌ನಲ್ಲಿ ಕಮಾಂಡೆಂಟ್ ಆಗಿ ಸೇವೆಯನ್ನು ಸಲ್ಲಿಸಿದಂಥ ಚುರ್ಚಿಹಾಳಮಠ ಅವರು ಸಾಮಾಜಿಕ ಸೇವೆಯಲ್ಲಿ ಯಾವಾಗಲೂ ಮುಂದೆ ಇದ್ದಂಥವರು. ಅವರು ಗದಗ್ ಜಿಲ್ಲೆಯ ಮುಂಡರಗಿ ಕ್ಷೇತ್ರದಿಂದ ನಾಲ್ಕನೇ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ಒಬ್ಬ ಮಾದರಿಯ ಶಾಸಕರಾಗಿ ಕೆಲಸವನ್ನು ಮಾಡಿದಂಥವರು. ಚುರ್ಚಿಹಾಳಮಠ ಅವರು ಒಬ್ಬ

ಆದರ್ಶ ರಾಜಕಾರಣ ಮಾಡಿದಂಥ ವ್ಯಕ್ತಿಯಾಗಿದ್ದರು. ಅವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಅವರ ಮೃತ್ಯುವಿನಿಂದ ಅವರ ಕುಟುಂಬಕ್ಕೇನು ದುಃಖವಾಗಿದೆ, ಅದರಲ್ಲಿ ನಾವೆಲ್ಲಾ ಪಾಲ್ಗೊಳ್ಳುತ್ತೇವೆ. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೇ, ನಾನು ಪ್ರತಿನಿಧಿಸತಕ್ಕಂಥ ಮುಂಡರಗಿ ವಿಧಾನಸಭಾ ಕ್ಷೇತ್ರದಿಂದ ಖ್ಯಾತ ವೈದ್ಯರು, ಸ್ವಾತಂತ್ರ್ಯ ಯೋಧರೂ ಆದಂಥ ಡಾ: ಸಿ.ಎಂ. ಚುರ್ಚಿಹಾಳಮಠ್ ಅವರು 21–06–06 ರಂದು ನಿಧನರಾದರು. ಬಹಳ ಅಪರೂಪದ ಹಿಂದಿನ ಶಾಸಕರ ಪೈಕಿ ಅವರೂ ಒಬ್ಬರು. ಅವರು ಪತ್ರಿಕಾ ಸಂಪಾದಕರಾಗಿ ಅಷ್ಟೇ ಅಲ್ಲ ರಜಾಕರ್ ಚಳುವಳಿಯಲ್ಲಿ ಭಾಗವಹಿಸಿದ್ದರು. ನಮ್ಮ ಮುಂಡರಗಿ ಕೇವಲ ಮೂರು ಕಿಲೋಮೀಟರ್ ಅಂತರದಲ್ಲಿ ಹೈದರಾಬಾದ್‌ನ ಗಡಿ ಇದೆ. ಅಂದರೆ ಕೊಪ್ಪಳ ತಾಲ್ಲೂಕಿಗೆ ಹಿಂದೆ ಬಹಳ ದೊಡ್ಡ ಹೋರಾಟವನ್ನು ಮಾಡಿದ್ದಾಗ ಬಹುಶಃ ಎರಡು ಸಲ ಅವರಿಗೆ ಗುಂಡಿನ ಏಟು ಬಡಿದಿತ್ತು. ಅಂಥ ಸ್ಥಿತಿಯಲ್ಲೂ ಕೂಡ ರಜಾಕರಾ ವಿರುದ್ಧ ಹೋರಾಟವನ್ನು ಮಾಡಿದ್ದರು. ಆ ಚಳುವಳಿಯಲ್ಲೂ ಕೂಡ ಅವರು ಯಶಸ್ಸನ್ನು ಸಂಪಾದಿಸಿದರು. ಅದೇ ರೀತಿ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಮೈಸೂರು ಚಳುವಳಿಯಲ್ಲೂ ಎಲ್ಲಾ ಯುವಕರನ್ನು ಕಟ್ಟಿಕೊಂಡು ಬಂದು ಇಲ್ಲಿಯೂ ಕೂಡ ಚಳುವಳಿಯನ್ನು ಮಾಡಿ ದಾವಣಗೆರೆ ಜೈಲಿನಲ್ಲಿ ಬಹಳ ವರ್ಷಗಟ್ಟಲೆ ಅವರು ಜೈಲು ವಾಸವನ್ನೂ ಕೂಡ ಅನುಭವಿಸಿದರು. ಅವರು ಒಬ್ಬ ಪ್ರಸಿದ್ಧ ಆಯುರ್ವೇದ ವೈದ್ಯರು. ಆಯುರ್ವೇದದಲ್ಲಿ ಬಹಳ ಜನ ತರುಣ ಡಾಕ್ಟರುಗಳು ಅವರ ಕೈಯಲ್ಲಿ ತಯಾರಾಗಿದ್ದಾರೆ. ಅಂಥ ಒಬ್ಬ ನಾಯಕರು ನಿಜವಾಗಿ ನಿಧನರಾದುದು ನಮಗೆ ಬಹಳ ನೋವಾಗಿದೆ. ಬಹುಶಃ ನನಗನ್ನಿಸುತ್ತದೆ, ನನಗೆ ತಿಳಿದ ಮಟ್ಟಿಗೆ ಇಡೀ ಅವರ ದೇಹವನ್ನು ದಾನ ಮಾಡಿದರು. ಅದನ್ನು ಅವರ ಮೊಮ್ಮಗಳ ಕಡೆಯಿಂದ ಬರೆಸಿಟ್ಟು ಮನೆಯವರೆಲ್ಲರಿಗೂ ಹೇಳಿ ನನ್ನ ದೇಹವನ್ನು ನೀವು ದಫನ್ ಮಾಡಬಾರದು, ಅದನ್ನು ನೀವು ಕಾಲೇಜಿಗೆ ಕೊಡಬೇಕೆಂದು ಹೇಳಿ ಸಂಪೂರ್ಣ ದೇಹವನ್ನು ದಾನ ಮಾಡಿದರು. ನಾನು ಆ ದಿವಸ ಇಲ್ಲಿದ್ದಾಗ ಅವರು ರಾತ್ರಿ ಒಂದೂವರೆ ಗಂಟೆಗೆ ತೀರಿಕೊಂಡರು ಎಂದು ಹೇಳಿ ನನಗೆ ಫೋನ್ ಬಂತು. ಆ ದಿವಸ ನಾನು ತಮಗೆ ಬರೆದು ರಜೆ ಕೇಳಿ ಹೋಗಿದ್ದೆ. ನಾನು ಹೋದಮೇಲೆ ಮತ್ತೆ ಅಲ್ಲಿ ಎಲ್ಲರನ್ನೂ ಕೂಡಿಸಿ ಅವರ ಇಚ್ಛೆಯ ಪ್ರಕಾರ ಅವರ ದೇಹವನ್ನು ಕೆಎಂಸಿ–ಗೆ ಸಂಪೂರ್ಣ ದಾನ ಮಾಡಿದರು. ನನಗೆ ತಿಳಿದ ಮಟ್ಟಿಗೆ ಬೇರೆ ಯಾರಾದರೂ ಶಾಸಕರು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಬಹುಶಃ ಶಾಸಕರ ಪೈಕಿ ಅವರು ಸಂಪೂರ್ಣ ದೇಹವನ್ನು ದಾನ ಮಾಡಿರುವವರಲ್ಲಿ ಅವರೇ ಮೊದಲಿಗರು ಎಂದು ನನಗನ್ನಿಸುತ್ತದೆ. ಅದೇ ರೀತಿ ನಮ್ಮ ಉತ್ತರ ಕರ್ನಾಟಕದಲ್ಲಿಯೇ ದೇಹವನ್ನು ದಾನ ಮಾಡಿದವರಲ್ಲಿ ಅವರೇ ಮೊದಲನೆಯವರು. ಅವರು ಬರೆದಂಥ ಒಂದು ಪತ್ರವನ್ನು ನಾನು ಓದಿದ್ದೇನೆ. ಅವರು ಎಷ್ಟು ಚೆನ್ನಾಗಿ ಬರೆದಿದ್ದಾರೆಂದರೆ ಅವರ ಮೊಮ್ಮಗಳಿಗೆ ಹೇಳಿ ಆಕೆ ಕೈಯಲ್ಲಿ ಬರೆಸಿದ್ದಾರೆ. ಹಾಗೆ ಅವರೇ ಹೇಳಿ ಬರೆಸಿದ್ದರೂ ಕೂಡ

ಅಲ್ಲಿ ಜನ ಕೇಳುವುದಕ್ಕೆ ತಯಾರಿರಲಿಲ್ಲ. ಇಲ್ಲಾ, ನಾವು ದಫನ್ ಮಾಡುತ್ತೇವೆಂದು ಹೇಳುತ್ತಿದ್ದರು. ಮತ್ತೆ ನಾನು ಅಲ್ಲಿಗೆ ಹೋದ ಮೇಲೆ ಅವರ ಒಂದು ಭಾವನೆಯನ್ನು ಇವತ್ತು ನಾವುಗಳು ಅರಿತುಕೊಳ್ಳಬೇಕಾಗುತ್ತದೆಂದು ಹೇಳಿದೆ. ಬಹುಶಃ ಬಸವಣ್ಣನವರು ಹಿಂದೆ ಒಂದು ಮಾತನ್ನು ಹೇಳುತ್ತಾರೆ.

"ವ್ಯಾಧನೊಂದು ಮೊಲವ ತಂದರೆ ಸಲಹಾವಕ್ಕೆ ಬಿಳಿವರಯ್ಯ
ನೆಲೆನಾಲ್ದನ ಎಣಿಯೆಂದರೂ ಒಂದಡಕೆಗೆ ಕೊಂಬುವರಿಲ್ಲಾ
ಮೊಲನಿಂದ ಕರತಕ್ತ ನರನ ಬಾಳ್ವೆ ಕೂಡಲಸಂಗಮದೇವ"

ಎಂದು ಹೇಳುತ್ತಾರೆ. ಆದರೆ ಇವತ್ತು ನರನ ಈ ದೇಹಕ್ಕೂ ಕೂಡ ಬೆಲೆ ಬಂದಿದೆ. ಇವತ್ತು ದೇಹವನ್ನು ದಾನ ಮಾಡಿದಾಗ ಕೆಎಂಸಿ ಯವರು ಅದನ್ನು ಬಂದು ತೆಗೆದುಕೊಂಡು ಹೋದರು. ಬಹಳ ಕಡೆ ಅದೂ ಕೂಡ ಕಳ್ಳವ್ಯಾಪಾರ ನಡೆಯುತ್ತಿದೆ. ಎಲ್ಲೆಲ್ಲೋ ದೇಹವನ್ನು ಕಿತ್ತುಕೊಂಡು ಹೋಗಿ ಮಾರಾಟ ಮಾಡುವ ಒಂದು ದಂಧೆ ಕೂಡ ಎಷ್ಟೋ ಕಡೆ ನಡೆಯುತ್ತಿದೆ. ಹಾಗೆ ಇವತ್ತು ನರನ ದೇಹಕ್ಕೂ ಕೂಡ ಬೆಲೆ ಬಂದಿರುವುದರಿಂದ ಇಂಥವರು ಆದರ್ಶಿಗಳಾಗುತ್ತಾರೆ. ನಮ್ಮ ಡಿ.ಎಂ. ಚಂದ್ರಶೇಖರ್, ಮುಖ್ಯ ನ್ಯಾಯಮೂರ್ತಿಗಳು, ಅವರೂ ಕೂಡ ಕೊನೆಯಲ್ಲಿ ಬರೆದು ತಮ್ಮ ದೇಹವನ್ನು ದಾನವಾಗಿ ಕೊಟ್ಟರು. ಚುರ್ಚಿಹಾಳಮಠ್ ಅವರು ಬರೆದ ಒಂದು ಪತ್ರವನ್ನು ಓದಿ ನಾನು ಅಲ್ಲಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ಶ್ರೀ 1008 ಜಗದ್ಗುರು ಉಜ್ಜಯಿನಿ ಸದ್ಧರ್ಮ [illegible]ದ ನೇರ ಶಾಖಾ ಅಳವಂಡಿ (ಕೊಪ್ಪಳ ಜಿಲ್ಲೆ) ಸಂಸ್ಥಾನದ ಮಠದ ಶ್ರೀ ಷಟ್ಬ್ರಃ ಸಿದ್ದಲಿಂಗ [illegible]ಾಚಾರ್ಯ ಸ್ವಾಮೀಜಿ ಆಯುರ್ವೇದ ಮೆಡಿಕಲ್ ಕಾಲೇಜ್, ಮುಂಡರಗಿ:

"ನಾನು ಡಾ: ಚನ್ನಬಸಯ್ಯ ಮಹಾಂತಯ್ಯ ಚುರ್ಚಿಹಾಳಮಠ, ಮಾಜಿ ಕಮಾಂಡಿಂಗ್ ಹೋಂಗಾರ್ಡ್, ಮಾಜಿ ಶಾಸಕ, ಮಾಜಿ ಸ್ವಾತಂತ್ರ್ಯ ಯೋಧ, ಮುಂಡರಗಿ ಜಿಲ್ಲಾ : ಗದಗ್. ವಿಷಯ: ತಮ್ಮ ಕಾಲೇಜಿಗೆ ದೇಹದಾನ ಮಾಡುವ ಕುರಿತು.

ಶ್ರೀಮಾನ್ ಅಧ್ಯಕ್ಷರು : ಪ್ರಿನ್ಸಿಪಾಲರು, ಇವರಿಗೆ,

ಮಾನ್ಯರೆ,

ತಮ್ಮ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಶಾರೀರ ಶಾಸ್ತ್ರ ವಿಭಾಗಕ್ಕೆ ದೇಹ ಛೇದಿಸಿ ವೈಜ್ಞಾನಿಕ ಪರೀಕ್ಷೆಗಾಗಿ ಮೃತ ದೇಹಗಳ ಅವಶ್ಯವಿರುವುದು ವೈದ್ಯನಾದ ನನಗೆ ಅನುಭವದ ಮಾತು.

ಈ ವಿಷಯವಾಗಿ ವೈದ್ಯ ವಿಜ್ಞಾನಿಗಳಾದ ಡಾ: ನಾಗಲೋಟಿಮಠ ಇವರ ಮಾತಿನಂತೆ ಸತ್ತಮೇಲೆ ಸಮಾಜ ಸೇವೆ ಎನ್ನುವ ಹೇಳಿಕೆಯನ್ನು ಗಮನಿಸಿ ನಾನು ಸ್ವಇಚ್ಛೆಯಿಂದಲೂ, ಆತ್ಮ ಸಂತೋಷದಿಂದಲೂ ನನ್ನ ಆತ್ಮ ಸಿದ್ದಲಿಂಗನಲ್ಲಿ ಲೀನವಾದ ಮೇಲೆ ಉಳಿದ ಈ ದೇಹವನ್ನು ತಮ್ಮ

ವಿದ್ಯಾಲಯಕ್ಕೆ ದಾನ ಮಾಡಬೇಕೆಂದು ಸ್ವಇಚ್ಛೆಯಿಂದ ನಿರ್ಣಯಿಸಿದ್ದು ನಮ್ಮ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಮುಗಿಸಿ ನನ್ನ ದೇಹವನ್ನು ಪಡೆಯಬೇಕೆಂದು ಸ್ವಪ್ರೇರಣೆಯಿಂದ ಪ್ರಮಾಣ ಪೂರಕ ಅರಿಕೆ ಮಾಡಿಕೊಳ್ಳುವೆ.

ಈ ಸಂದರ್ಭದಲ್ಲಿ ನನ್ನ ಬಂಧುಗಳು ಯಾರೂ ಯಾವುದೇ ತಕರಾರು ಮಾಡದೆ ನನ್ನ ಸ್ವಇಚ್ಛೆಯನ್ನು ಪೂರ್ಣ ಮಾಡಿ ಅಂದರೆ ಈ ದೇಹವನ್ನು ದಾನ ಮಾಡಿ ನನ್ನ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಎಲ್ಲರಲ್ಲಿ ಸವಿನಯ ಕೋರಿಕೆ".

ಈ ರೀತಿಯಾಗಿ ಅವರು ಬರೆದಿಟ್ಟು ಅವರು ಲಿಂಗೈಕ್ಯವಾದರು. ಆ ದಿಸೆಯಲ್ಲಿ ಅವರ ದೇಹ ಇವತ್ತು ಸಂಪೂರ್ಣವಾಗಿ ಅದನ್ನು ಕೆಎಂಸಿಗೆ ಕೊಡುವುದರ ಮೂಲಕ ನಿಜವಾಗಿ ಅವರ ಆತ್ಮಕ್ಕೆ ಶಾಂತಿಯೇನಾಗಿದೆ, ಆ ದೃಷ್ಟಿಯಿಂದಲೂ ಕೂಡ ನಿಜವಾಗಿ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರು ನಿಜಲಿಂಗಪ್ಪನವರ ಕಾಲಕ್ಕೆ ಇದ್ದರು. ಕೊನೆಯಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದಾಗ ಅವರು ಎಐಸಿಸಿ ಅಧ್ಯಕ್ಷರಾಗುವ ಮೊದಲು ಅವರು ಈ ಸದನದಲ್ಲಿ ಸದಸ್ಯರಾಗಿದ್ದರು. ನಮ್ಮ ಮುಂಡರಗಿ ಕ್ಷೇತ್ರದ ಅಭಿವೃದ್ಧಿಗಾಗಿ ಬಹಳ ಉತ್ತಮವಾದ ಕೆಲಸವನ್ನು ಮಾಡಿದಂಥವರು. ಅವರ ಕಾಲಕ್ಕೆ ಆದ ಕೆಲಸ ಇವತ್ತು ನಮಗೂ ಮಾಡುವುದಕ್ಕಾಗಲಿಲ್ಲ. ಆ ರೀತಿಯಾಗಿ ಒಬ್ಬ ಸ್ವಾತಂತ್ರ್ಯ ಯೋಧರಾಗಿ ಅವರು ನಮ್ಮ ಕರ್ನಾಟಕ ಏಕೀಕರಣ ಚಳುವಳಿಯಲ್ಲೂ ಭಾಗವಹಿಸಿದ್ದರು. ಹೈದರಾಬಾದ್ ಏಕೀಕರಣ ಚಳುವಳಿಯಲ್ಲೂ ಭಾಗವಹಿಸಿದ್ದರು. ನಮ್ಮ ಗೋವಾ ಚಳುವಳಿಯಲ್ಲೂ ಕೂಡ ಭಾಗವಹಿಸಿದ್ದರು. ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳ ಜನರಿಗೆ ಪ್ರೋತ್ಸಾಹ ಮಾಡಿದ ಒಬ್ಬ ಸ್ವಾತಂತ್ರ್ಯ ಯೋಧರು ಇವತ್ತು ಅಗಲಿ ಹೋಗಿರುವುದು ನಿಜವಾಗಿ ನಮ್ಮ ನಾಡಿಗೆ ತುಂಬಲಾರದ ಹಾನಿಯಾಗಿದೆ. ಆ ಕಾರಣದಿಂದ ತಮ್ಮ ಸಂತಾಪ ಸೂಚನೆಯನ್ನು ಬೆಂಬಲಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

2. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ದಿನಗೂಲಿ ನೌಕರರು ಈವತ್ತು ಸ್ಟ್ರೈಕ್ ಮಾಡುತ್ತಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಸ್ಟ್ರೈಕ್ ಮಾಡುತ್ತಿದ್ದಾರೆ. ಅವಕಾಶ ಮಾಡಿಕೊಡಬೇಕು.